ದಾವಣಗೆರೆಯಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ

೬೪೭. ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆಯಲ್ಲಿ ಸರ್ಕಾರಿ ಪದವಿ ಕಾಲೇಜು ತೆರೆಯಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾಲೇಜನ್ನು ತೆರೆಯಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ಹಾಗೂ ಒಂದು ಮಹಿಳಾ ಕಾಲೇಜನ್ನಾದರೂ ಸ್ಥಾಪಿಸಲಾಗುವುದೆ ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು) —

ಅ) ಹೌದು.

ಆ) ದಾವಣಗೆರೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯಲು ಸರ್ಕಾರಕ್ಕೆ ಸಾಧ್ಯವಿಲ್ಲ.

ಶ್ರೀ ವೈ. ಎಂ. ವೀರಣ್ಣ.—ಸನ್ಮಾನ್ಯ ಸಭಾಧ್ಯಕ್ಷರೆ. ದಾವಣಗೆರೆ ನಗರದಲ್ಲಿ ಸರ್ಕಾರಿ ಮಹಿಳಾ ಪದವಿ ಕಾಲೇಜನ್ನು ತೆರೆಯಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ನಾವು ವಿನಂತಿಸಿಕೊಂಡಿದ್ದೇವೆ. ಈಗಾಗಲೇ ತಮಗಲ್ಲಾ ಗೊತ್ತಿರುವಂತೆ, ದಾವಣಗೆರೆ ವಿದ್ಯಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಅಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಒಂದು ಮಹಿಳಾ ಪದವಿ ಕಾಲೇಜು ಅತ್ಯವಶ್ಯಕವಾಗಿ ಆಗಬೇಕಾಗಿರುತ್ತದೆ. ಮತ್ತು ದಾವಣಗೆರೆಯ ಜನ ಸಂಖ್ಯೆಯೂ ಜಾಸ್ತಿಯಾಗಿದೆ. ಊರಿನ ಹಳೆಯ ಭಾಗದಲ್ಲಿ ಯಾವ ಒಂದು ಮಹಿಳಾ ಕಾಲೇಜು ಇಲ್ಲ. ಊರಿನ ಮಧ್ಯ ಭಾಗದಲ್ಲಿ ರೈಲ್ವೆ ಟ್ರಾಕ್ಟರ್ ಹಾದು ಹೋಗಿದೆ. ಊರಿನ ವಿದ್ಯಾರ್ಥಿನಿಯರು ಊರಿನ ಹೊಸ ಬಡಾವಣೆಗೆ ಹೋಗಿ, ಪದವಿ ಕಾಲೇಜಿಗೆ ಹೋಗ ಬೇಕಾದಂಥ ಸಂದರ್ಭ ಇದೆ. ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಅತಿ ಹೆಚ್ಚಾಗಿರುವುದರಿಂದ ಊರಿನ ಮಧ್ಯ ಭಾಗದಲ್ಲಿ ಒಂದು ಸರ್ಕಾರಿ ಮಹಿಳಾ ಪದವಿ ಕಾಲೇಜು ಆಗಬೇಕಾಗಿರತಕ್ಕ ಅಥಾದ್ದ ಅತ್ಯಗತ್ಯವಾಗಿರುವುದರಿಂದ ಅದು ಆಗಬೇಕೆಂದು ಸದನದ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಾಧ್ಯವಿಲ್ಲ ವೆನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಇದನ್ನು ಪುನರ್ ಪರಿಶೀಲಿಸಿ ಆಗುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಈ ಮೂಲಕ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು —ಮಾನ್ಯ ಸದಸ್ಯರು ಪದವಿ ಕಾಲೇಜಿನ ಬಗ್ಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಪಿಟಿಷನ್ ಟೈಮ್‌ನಲ್ಲಿ ಮಾಡಿ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳು, ಖಾಸಗಿ ಕಾಲೇಜುಗಳು ಸಾಕಷ್ಟು ಇವೆ. ಅಂದರೆ ಮಹಿಳಾ ಕಾಲೇಜು ಇದೆ, ಮತ್ತು ಹುಡುಗರ ಕಾಲೇಜು ಇದೆ. ಆದರೆ ಈ ಪ್ರೈವೇಟ್ ಕಾಲೇಜಿನಲ್ಲಿ ಹೆವಿ ಫೀಸ್ ಡೊನೇಷನ್ ಇರುವುದರಿಂದ ಬಡ ಹುಡುಗರು ಆ ಕಾಲೇಜುಗಳಲ್ಲಿ ಎಂಟರ್ ಆಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಲ್ಲಿ ಒಂದು ಸರ್ಕಾರಿ ಕಾಲೇಜನ್ನು ತೆರೆಯುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನ್ಯಾಮಿ ತಮಗೆ ತಿಳಿದಿರುವ ಹಾಗೆ, ಇವತ್ತಿನ ಸರ್ಕಾರದ ಹಣಕಾಸಿನ ಪರಿಸ್ಥಿತಿಯಲ್ಲಿ ಹೌದು ಅಥವಾ ಆಗಲಿ ಎಂದು ಹೇಳುವುದು ಬಹಳ ಕಷ್ಟದ ವಿಚಾರ. ಮಾನ್ಯ ಉಪಾಧ್ಯಕ್ಷರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ, ಸಮಯ ಬಂದಾಗ ನೋಡೋಣ.

ಕಾಡಾನೆಗಳ ಹಾವಳಿ

೬೭೪. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) —ಮಾನ್ಯ ಕೃಷಿ ಹಾಗೂ ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಡಾನೆಗಳ ಹಾವಳಿಯಿಂದ ರಾಜ್ಯದಲ್ಲಿ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ಬಂದಿದ್ದರೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಬೆಂಗಳೂರು ಜಿಲ್ಲೆಯಲ್ಲಿ ಕಾಡಾನೆಗಳಿಂದ ರೈತರಿಗೆ ತೊಂದರೆಯಾಗಿದೆಯೆ ?

ಈ) ಹಾಗಿದ್ದಲ್ಲಿ ರೈತರಿಗೆ ಪರಿಹಾರ ಕೊಡಲು ತೆಗೆದುಕೊಳ್ಳಲಾದ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಫಸಲು ನಷ್ಟಕ್ಕೆ ಪರಿಹಾರವನ್ನು ಸಂಬಂಧಪಟ್ಟ ಜಮೀನಿನ ಮೂಲೀಕರಿಂದ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಿ ನಂತರ ಪರಿಹಾರ ನೀಡಲಾಗುವುದು. ಮಾನವ ಪ್ರಾಣ ಹಾನಿ ಅಥವಾ ಗಾಯಗೊಂಡ ಅಂತಹವರಿಗೆ ತಕ್ಷಣ ಪರಿಹಾರ ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ೪೯ ಜನ ಆನೆ ಕಾವಲುಗಾರರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆನೆಗಳನ್ನು ಓಡಿಸಲು ಪಟಾಕಿಗಳನ್ನು ಮದ್ದುಗುಂಡುಗಳನ್ನು ಉಪಯೋಗಿಸಲಾಗುತ್ತದೆ.

ಇ) ಕೆಲವು ಕಡೆ ಬೆಂಗಳೂರು ನಗರ ಗ್ರಾಮಾಂತರ ವಿಭಾಗಗಳ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ರೈತರು ಬೆಳೆದಿರುವ ಬೆಳೆಗಳಿಗೆ ಮತ್ತು ಮನುಷ್ಯರಿಗೆ ಕಾಡಾನೆಗಳಿಂದ ಹಾನಿಯುಂಟಾಗಿರುತ್ತದೆ.

ಈ) ಸರ್ಕಾರಿ ಆದೇಶ ಸಂಖ್ಯೆ. ಎಹೆಚ್‌ಎಫ್‌ಎಫ್ ೨೨. ಎಫ್‌ಡಬ್ಲ್ಯೂಎಲ್ ೮೮ ದಿನಾಂಕ. ೨೯-೬-೮೮ರ ಪ್ರಕಾರ ರೈತರ ಫಸಲು ಆನೆಗಳಿಂದ ನಷ್ಟವಾದರೆ ಮೂಲೀಕರ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಿ ನಂತರ ಫಸಲು ನಷ್ಟಕ್ಕೆ ತಕ್ಕ ಪರಿಹಾರ ನೀಡಲಾಗುತ್ತದೆ. ಮತ್ತು ಆನೆಗಳಿಂದ ಮಾನವನು ಸತ್ತರೆ ರೂ. ೧೦,೦೦೦-೦೦ ಮತ್ತು ಖಾಯಂ ಅಂಗಹೀನರಾದರೆ ರೂ. ೫,೦೦೦-೦೦ ನೀಡಲಾಗುತ್ತದೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕಾಡಾನೆಗಳ ಹಾವಳಿಯಿಂದ ರಾಜ್ಯದಲ್ಲಿ ರೈತರಿಗೆ ತೊಂದರೆಯಾಗತಕ್ಕ ವಿಷಯದ ಬಗ್ಗೆ ಕಾವಲುಗಾರರನ್ನು ನೇಮಕ ಮಾಡಿಕೊಂಡಿರುವುದು ಕಾಂಪನ್‌ಸೇಷನ್ ಕೊಡುವುದು ಡೆತ್ ಆದರೆ ಇಷ್ಟು ಇಂಜೂರ್ಡ್ ಆದರೆ ಇಷ್ಟು ಎಂದು ಹೇಳಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡಾನೆ ಹಾವಳಿ ಜಾಸ್ತಿಯಾಗಿರುವುದರಿಂದ ರೈತರಿಗೆ ಕಳೆದ ೪-೫ ತಿಂಗಳಲ್ಲಿ ಬಹಳಷ್ಟು ನಷ್ಟವಾಗಿದೆ. ಹಿಂದೆ ಏನು ಕಾಂಪನ್‌ಸೇಷನ್ ಕೊಡುತ್ತಿದ್ದರು ಆದಕ್ಕೆ ಈಗಿನ ಕಾಂಪನ್‌ಸೇಷನ್ ಅನ್ನು ಕಂಪೇರ್ ಮಾಡಿದಾಗ ಬಹಳ ಕಡಿಮೆಯಾಗಿದೆ. ಶೇಕಡ ನೂರಕ್ಕೂ ಹೆಚ್ಚು ಕಡಿಮೆಯಾಗಿದೆ. ಐದು ಸಾವಿರ ರೂಪಾಯಿ ಕೊಡುವ ಕಡೆ ಇನ್ನೂರು ರೂಪಾಯಿ, ಮುನ್ನೂರು ರೂಪಾಯಿ ಕೊಡುತ್ತಿದ್ದಾರೆ. ಹತ್ತು ಸಾವಿರ ಕೊಡುವ ಕಡೆ ಐದು ನೂರು ರೂಪಾಯಿ ಕೊಡುತ್ತಿದ್ದಾರೆ ರೈತರು ಹೋಗಿ ಕೇಳಿದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಬಹಳ ನಿರ್ಲಕ್ಷ್ಯ ಮನೋ ಭಾವನೆ ತಾಳಿದ್ದಾರೆ. ದಯವಿಟ್ಟು ರೈತರಿಗೆ ಎಲ್ಲಿ ಆನೆಗಳ ಹಾವಳಿಯಿಂದ ನಷ್ಟವಾಗಿದೆ. ಕೊಕೊನಟ್ ಟ್ರೀಸ್‌ಗೆ ಮತ್ತು ಮ್ಯಾಂಗೋ ಗಾರ್ಡನ್ಸ್‌ನಲ್ಲಿ ಬಹಳ ಹಾವಳಿಯಾಗಿದೆ. ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ನಷ್ಟವಾಗಿದೆ. ಆದ್ದರಿಂದ ಕಾಂಪನ್‌ಸೇಷನ್ ಕೊಡಲಿಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಜನರಿಂದ ಆನೆಗಳಿಗೆ ಹಾವಳಿ. ಆನೆಗಳಿಂದ ಜನಗಳಿಗೆ ಹಾವಳಿ. ಆದರಲ್ಲಿ ಆನೆಗಳು ರೈತರನ್ನೇ ಹುಡುಕಿಕೊಂಡು ಬಂದಿವೆ, ಹೀಗಾಗಿದೆ.

ಅಧ್ಯಕ್ಷರು.—ಈಗ ಆನೆಗಳ ಜೊತೆಗೆ ಕರಡಿಗಳೂ ಸೇರಿವೆ.

ಶ್ರೀ ವಾಟಾಳ್ ನಾಗರಾಜ್.—ಆನೆಗಳು ವಿಧಾನಸೌಧಕ್ಕೆ ಬಂದಾಗ ನಿಮಗೆ ಅರ್ಥವಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ಕರಡಿ ಒಂದೆ ಅಲ್ಲ, ಕರಡಿ, ಕೋತಿ, ಹುಲಿ ಎಲ್ಲ ಪ್ರಾಣಿಗಳದ್ದು ತೊಂದರೆ ಇದೆ. ಕಾಂಪನ್‌ಸೇಷನ್ ನಿಗದಿಯಾಗಿರತಕ್ಕದ್ದು ಸ್ವಲ್ಪ ಹೆಚ್ಚಾಗಬೇಕಾಲದ್ದು ಎಂದು ನನಗೆ ಕಂಡುಬರುತ್ತಿದೆ. ಅದನ್ನು ಪುನರ್ವಿಮರ್ಶೆ ಮಾಡತಕ್ಕ ಆವಶ್ಯಕತೆ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಅಧಿಕಾರಿಗಳು ಅದನ್ನು ಕೊಡುವುದಕ್ಕೆ ಸತಾಯಿಸುತ್ತಿದ್ದಾರೆ, ತೊಂದರೆ ಕೊಡುತ್ತಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಅದನ್ನು ತಕ್ಷಣ ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ ಒಟ್ಟಿನಲ್ಲಿ ಇದನ್ನು ಸ್ವಲ್ಪ ರೆವ್ಯೂ ಮಾಡತಕ್ಕ ಆವಶ್ಯಕತೆ ಇದೆ. ಅದನ್ನು ಸೂಕ್ತವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈಗ ನಿಗದಿಯಾಗಿರತಕ್ಕ ದರಗಳನ್ನು ಪುನರ್ ವಿಮರ್ಶೆ ಮಾಡುವುದಾಗಿ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಕಳೆದ ೪-೫ ವರ್ಷಗಳಲ್ಲಿ

ಏನು ಕ್ರಾಪ್ ಕಾಂಪನ್‌ಸೇಷನ್ ರೈತರಿಗೆ ಕೊಡುತ್ತಿದ್ದರು ಈಗ ಅದಕ್ಕಿಂತ ಕಡಿಮೆ ಕೊಡುತ್ತಿದ್ದಾರೆ. ಈಗಾಗಲೆ ನಿಗದಿತ ದರ ಏನಿದೆ ಅದಕ್ಕಿಂತ ಕಡಿಮೆ ಇದೆ. ರೈತರು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋದಾಗ ಬಹಳ ನಿರ್ಲಕ್ಷ್ಯತೆಯಿಂದ ಕಾಣುತ್ತಾರೆ, ಅವರು ಅರ್ಜಿಗಳನ್ನು ತೆಗೆದುಕೊಳ್ಳತಕ್ಕಂಥ ಮಟ್ಟದಲ್ಲೂ ಸಹಿತ ಅವರು ಇಲ್ಲ. ಇಂಥ ಪರಿಸ್ಥಿತಿ ಉದ್ಭವವಾಗಿದೆ. ೪-೫ ವರ್ಷಗಳ ಹಿಂದೆ ಏನು ಕೊಡುತ್ತಿದ್ದರೂ ಅಷ್ಟೇ ಇವತ್ತಿನ ದಿವಸ ಕೊಡುತ್ತಿರತಕ್ಕದ್ದು. ಅದನ್ನು ಕೂಡ ಸರಿಯಾಗಿ ಕೊಡುವುದಿಲ್ಲ. ರಾಜ್ಯಪಾಲರ ಆಡಳಿತದಲ್ಲಿ ೩-೪ ತಿಂಗಳ ಕಾಲ ಇದೇ ರೀತಿ ನಡೆದಿದೆ. ಅಷ್ಟು ನಿಗದಿತ ರೇಟ್‌ನಲ್ಲಿ ಕಾಂಪನ್ಸೇಷನ್ ಕೊಡುವುದಕ್ಕೆ ತಾವು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ.ಹೆಚ್. ರಂಗನಾಥ್.—ಏನು ಬೆಳೆ ಇಟ್ಟಿರುತ್ತಾರೆ ಅದು ನಾಶವಾಗುತ್ತದೋ, ನಷ್ಟವಾಗುತ್ತದೋ ಏನನ್ನುವುದರ ಮೇಲೆ ಪರಿಹಾರ ಕೊಡುವುದು ಅವಲಂಬಿಸಿರುತ್ತದೆ. ಕಬ್ಬು, ಭತ್ತಕ್ಕಾದರೆ ಜಾಸ್ತಿ, ರಾಗಿ ವಗೈರೆಗಳಿಗೆ ಕಡಿಮೆ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಅಂಥ ನಿದರ್ಶನ ಇದ್ದು ನನಗೆ ಪತ್ರ ಬರೆದರೆ ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಹುಲಿ ಹೆಸರನ್ನು ಇದರಲ್ಲಿ ಅವರು ಹೇಳಿದ್ದರಿಂದ ಹೇಳಬೇಕಾಗಿದೆ. ಮಲೆನಾಡಿನಲ್ಲಿ ವಿಪರೀತ ಹುಲಿಗಳ ಕಾಟವಾಗಿದೆ. ಅದರಲ್ಲೂ ರಿಸರ್ವ್ ಫಾರೆಸ್ಟ್‌ನಲ್ಲಿ ತೀರ್ಥಹಳ್ಳಿ ಮುಂತಾದ ಭಾಗಗಳಲ್ಲಿ ಹುಲಿಯನಂತೂ ಹೊಡೆಯುವ ಹಾಗಿಲ್ಲ...

ಶ್ರೀ ಕೆ ಎಚ್. ರಂಗನಾಥ್.—ಆನೆಗಳನ್ನೂ ಹೊಡೆಯುವ ಹಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಆದರೆ ಹುಲಿಗಳು ಜಾನುವಾರುಗಳ ಮೇಲೆ ಹಲ್ಲೆ ಮಾಡುತ್ತಿವೆ ಅಂಥಾದ್ದು ಒಂದೆರಡಲ್ಲ, ಹತ್ತಾರು ಕೇಸ್‌ಗಳಾಗಿವೆ. ಜಾನುವಾರುಗಳ ಮೇಲೆ ಹುಲಿಯಿಂದ ಆಗಿರತಕ್ಕ ಹಾವಳಿಯನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ತಕ್ಷಣ ವರದಿ ತರಿಸಿಕೊಂಡು ಸ್ಪೆಷಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಹಾವಳಿಗೊಳಗಾದ ಜನರಿಗೆ ಪರಿಹಾರಧನವನ್ನು ಸಮಯಕ್ಕೆ ಸರಿಯಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.— ಹುಲಿಗೆ ಅನ್ನ ತಿನ್ನುವುದಕ್ಕೆ ಹೇಳುವುದಕ್ಕಾಗುವುದಿಲ್ಲ. ಅದರಿ ಹಸುವಾಂಸವನ್ನೇ ತಿನ್ನುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಹಿಂದಿನ ಸರ್ಕಾರದವರು ಅನ್ನ ತಿನ್ನಬಹುದು ಎಂದು ಹೇಳಿದ್ದರು.

ಶ್ರೀ ಕೆ.ಹೆಚ್. ರಂಗನಾಥ್.—ವ್ಯವಸಾಯಕ್ಕೆ ಉಪಯೋಗಿಸತಕ್ಕ ದನಗಳು ಎತ್ತು ವಗೈರೆ ಹೋದರೆ ಗಮನ ಹರಿಸಬೇಕಾಗುತ್ತದೆ. ಮಲೆನಾಡು ಪ್ರದೇಶದಲ್ಲಿ ಗಿಡ್ಡ ಹಸುಗಳು ಅರ್ಧ ಸೇರು ಹಾಲು ಕೊಡುತ್ತವೆ. ಅಂಥದ್ದನ್ನೆಲ್ಲಿ ನೀವು ಕಾಡಿಗೆ ಬಿಡುತ್ತೀರಿ. ಹುಲಿಗೆ ಅದೇ ಆಹಾರವಾಗುತ್ತದೆ. ಅದು ಕಾದುಕೊಂಡಿರುತ್ತದೆ, ಬಂದಾಗ ಹಿಡಿದುಕೊಳ್ಳುತ್ತದೆ. ಅದನ್ನೂ ತಡೆಯಬೇಕು, ಅದಕ್ಕೂ ಸರ್ಕಾರದಿಂದ ಕ್ರಮ ತೆಗೆದುಕೊಳ್ಳಬೇಕೆಂದು, ಪ್ಲಾನ್ ಹಾಕಬೇಕೆಂದು ಹೇಳಿದರೆ ಹೇಗಾಗುತ್ತದೆ ?

ಶ್ರೀ ಡಿ.ಬಿ. ಚಂದ್ರೇಗೌಡ.—ನಿಗದಿತ ಪರಿಹಾರ ಕೊಡುವುದನ್ನು ಕೊಡಿ.

ಶ್ರೀ ಕೆ.ಹೆಚ್. ರಂಗನಾಥ್.—ತಾವು ಮಲೆನಾಡಿನಲ್ಲಿ ಮದುವೆಯಾಗಿದ್ದೀರಿ, ತಮಗೆ ಗೊತ್ತು. ತಮ್ಮ ಕಡೆ ಹಸುಗಳು ಕಾಲು ಲೀಟರ್ ಹಾಲು ಕೂಡ ಕೊಡುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್ — ಹುಲಿಗಳು ಹಳ್ಳಿಗಳಿಗೆ ಬಂದು ದನಗಳನ್ನು ಎತ್ತಿಕೊಂಡು ಹೋಗುತ್ತಿವೆ.

ಶ್ರೀ ಕೆ.ಹೆಚ್. ರಂಗನಾಥ್.—ನಾನು ತೀರ್ಥಹಳ್ಳಿಯ ವಿಷಯ ಹೇಳುತ್ತಿದ್ದೆ, ಹೆಗ್ಗಡದೇವನ ಕೋಟೆಯದು ಹೇಳಲಿಲ್ಲ. ನಿಮ್ಮ ಕಡೆ ಹಸುಗಳು ಸ್ವಲ್ಪ ದಪ್ಪವಾಗಿರುತ್ತವೆ, ಚೆನ್ನಾಗಿರುತ್ತವೆ. ಮಲೆನಾಡಿನಲ್ಲಿ ತುಂಬಾ ಸಣ್ಣಗೆ ಗಿಡ್ಡವಾಗಿರುತ್ತದೆ. ಅವನ್ನು ಮಲೆನಾಡು ಗಿಡ್ಡ ಎಂದು ಕರೆಯುತ್ತಾರೆ. ಅದು ಕಾಲು ಲೀಟರ್ ಹಾಲೂ ಕೊಡುವುದಿಲ್ಲ. ಅಂಥವನ್ನು ಇವರು ಹೊಡೆದು ಬಿಡುತ್ತಾರೆ. ಅದಕ್ಕೆ ಕಾಂಪೆನ್‌ಸೇಷನ್ ಜಾಸ್ತಿ ಕೊಡಿ ಎಂದು ಕೇಳಿದರೆ ಕಷ್ಟವಾಗುತ್ತದೆ. ನೋಡೋಣ ಎಂತಹ ಧನ ಹೋಗಿತ್ತು, ಒಳ್ಳೆಯ ವ್ಯವಸಾಯದ ಹೋರಿ ಹೋಗಿತ್ತೆ ಅಥವಾ ಮಲೆನಾಡು ಗಿಡ್ಡ ಹೋಗಿತ್ತೆ, ಎಂದು ಪರಿಶೀಲನೆ ಮಾಡಿ ಕಾಂಪೆನ್‌ಸೇಷನ್ ಕೊಡುವುದಕ್ಕೆ ಯೋಚನೆ ಮಾಡುತ್ತೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಆನೆಗಳ ಕಾಟವನ್ನು ತಪ್ಪಿಸುವುದಕ್ಕೆ ಯಾವ ಸರ್ಕಾರಕ್ಕೂ ಆಗುತ್ತಾ ಇಲ್ಲ. ಇಲ್ಲದೇಹೋದರೆ ಕುಟುಂಬ ಯೋಜನೆಯನ್ನೇನಾದರೂ ಅದಕ್ಕೆ ಅಪ್ಲೈ ಮಾಡಲಿ. ಇಲ್ಲದಿದ್ದರೆ ನ್ಯಾಯವಾಗಿ ಅವುಗಳ ಕಾಟವನ್ನು ತಪ್ಪಿಸಲಿ ಈ ಎರಡರಲ್ಲಿ ಯಾವುದಾದರೂ ಒಂದನ್ನು ಮಾಡುವುದಕ್ಕೆ ಇವರಿಗೆ ಆಗುವುದಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು — ಆನೆಗಳಿಗೆ ಕುಟುಂಬ ಯೋಜನೆ ಮಾಡುವುದಕ್ಕೆ ಮಹದೇವ್ ಅವರ ನೇತೃತ್ವದಲ್ಲಿ ಒನ್ ಮ್ಯಾನ್ ಕಮೀಷನ್ ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್.—ಈಗ ಆನೆಗಳ ಸಂತತಿ ಕಡಿಮೆ ಇರುವುದರಿಂದ ಕುಟುಂಬ ಯೋಜನೆಗೆ ಮಾತ್ರ ನಾನು ಸಮಗ್ರವಾಗಿ ವಿರೋಧ. ಕುಟುಂಬ ಯೋಜನೆಗೆ ನಾನು ಖಂಡಿತ ಒಪ್ಪುವುದಿಲ್ಲ.

ಶ್ರೀ ಎಂ. ಮಹದೇವ್.—ಈಗ ತೆಂಗಿನ ಸಸಿಗಳನ್ನು ಫಲ ಬಿಡುವವರೆಗೆ ಸಾಕಬೇಕಾದರೆ ಸುಮಾರು ೮ ವರ್ಷ ರೈತರು ಕಷ್ಟಪಟ್ಟು ತೆಂಗಿನ ಸಸಿಗಳಿಗೆ ನೀರು ಹಾಕಿ ಬೆಳೆಸಬೇಕು. ಅದು ಬೆಳೆದು ಫಲ ಬಿಡುವುದಕ್ಕೆ ಪ್ರಾರಂಭವಾದಾಗ ಒಮ್ಮೆಲೇ ಆನೆಗಳು ಬಂದು ೪೦–೫೦ ಸಸಿಗಳನ್ನು ಕಿತ್ತುಹಾಕಿದರೆ ಅವನ ಪರಿಸ್ಥಿತಿ ಏನು ? ಅದಕ್ಕೆ ಕೇವಲ ಕಡಿಮೆ ಪ್ರಮಾಣದ ಪರಿಹಾರ ಕೊಡುತ್ತೀರಿ. ಒಂದು ಸಸಿ ಸಾಕಬೇಕಾದರೆ ಮಗು ಸಾಕಿದಂತೆ ಸಾಕಬೇಕು. ಫಲ ಬಿಡುವಂಥ ಕಾಲದಲ್ಲಿ ಒಂದೇ ಸಾರಿ ೧೦–೨೦ ಆನೆಗಳು ಬಂದು ಅವನ್ನು ಕಿತ್ತು ಎಸೆದು ಬಿಟ್ಟರೆ ಮತ್ತೆ ಚೇತರಿಸಿಕೊಳ್ಳಬೇಕಾದರೆ ಬಹಳ ಕಷ್ಟ. ಅದರ ಪರಿಹಾರ ಡಬ್ಬಲ್ ಕೊಡಬೇಕಾಗುತ್ತದೆ. ಆದೇರೀತಿ ಕಬ್ಬಿನ ಬೆಳೆಯನ್ನೂ ಒಮ್ಮೆ ಹಾಳು ಮಾಡಿತು ಅಂದರೆ ಇನ್ನು ಎರಡು ವರ್ಷ ತನಕ ಅವನು ಕಷ್ಟಪಡಬೇಕು. ವಿಧಿಲಾಗಿ ಸಾಮಾನ್ಯವಾದ ರೈತ ಕಾಡಿಗೆ ಹೋದಾಗ ಅವನ ಪ್ರಾಣ ಹಾನಿಯಾದರೆ ೫ ಸಾವಿರ ೧೦ ಸಾವಿರ ರೂಪಾಯಿ ಹಣ ಕೊಡುತ್ತಾರೆ. ಅದು ಲೆಕ್ಕಕ್ಕಿಲ್ಲದ ಹಣ. ಒಬ್ಬ ವ್ಯಕ್ತಿಯ ಸಂಪಾದನೆಯ ಮೇಲೆ ಇಡೀ ಕುಟುಂಬದ ಜೀವನ ಅವಲಂಬಿಸಿರುವ ಸನ್ನಿವೇಶದಲ್ಲಿ ಕೊನೇಪಕ್ಷ ೨೫ ಸಾವಿರ ರೂಪಾಯಿಗಳನ್ನಾದರೂ ಪರಿಹಾರ ಕೊಡಬೇಕು. ಏಕೆಂದರೆ, ಆನೆಯ ಕಾಲಿನಿಂದ ತುಳಿಸಿ ಕೊಳ್ಳಬೇಕು ಎಂದು ಯಾರೂ ಮುಂದೆ ಹೋಗುವುದಿಲ್ಲ. ಬಸ್ ಆಕ್ಸಿಡೆಂಟ್ ಆದರೆ ಒಂದು ರೀತಿ ಆಗುತ್ತದೆ, ಫೈರಿಂಗ್ ಆದರೆ ಇನ್ನೊಂದು ರೀತಿ ಆಗುತ್ತದೆ. ಆದ್ದರಿಂದ ಕಾಡಿನಲ್ಲಿ ಪ್ರಾಣ ಹೋದಾಗ ವಿಶೇಷ ಸಂದರ್ಭ ಎಂದು ಪರಿಗಣಿಸಬೇಕು. ದಯವಿಟ್ಟು ಸಚಿವರು ಆಶ್ವಾಸನೆ ಕೊಡಬೇಕು. ಸಚಿವರು ೨೫ ಸಾವಿರ ರೂಪಾಯಿಯಾದರೂ ಪರಿಹಾರ ಧನ ಕೊಡುತ್ತೇವೆ ಎಂದು ಹೇಳಬೇಕು.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಎಂ. ಮಹದೇವ್.—ಆನೆಗಳ ಕಾಟದಿಂದ ಪ್ರಾಣ ತೆತ್ತವರ ಕುಟುಂಬಕ್ಕೆ ಈಗ ಕೊಡತಕ್ಕ ಪರಿಹಾರ ಸಾಲದು. ಅದನ್ನು ೨೫ ಸಾವಿರ ರೂಪಾಯಿಗಳಿಗಾದರೂ ಹೆಚ್ಚಿಸುತ್ತಾರೆಯೇ ? ಹೆಚ್ಚಿಸುವುದನ್ನು ಪರಿಶೀಲನೆ ಮಾಡುತ್ತೀರ ?

ಶ್ರೀ ಕೆ.ಎಚ್. ರಂಗನಾಥ್.—ಸಾವಾದರೆ ಈಗ ಹತ್ತು ಸಾವಿರ ರೂಪಾಯಿ ಕೊಡುತ್ತಿದ್ದೇವೆ; ಗಾಯವಾದರೆ, ಊನವಾದರೆ ೫ ಸಾವಿರ ರೂಪಾಯಿ ಕೊಡುತ್ತೇವೆ. ಸಾಕಷ್ಟು ಹಣ ಕೊಡುತ್ತಿದ್ದೇವೆ. ಇದಕ್ಕಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

೧೧–೩೦ ಎ.ಎಂ.

ಶ್ರೀ ಕೆ.ಹೆಚ್. ಪಾಟೀಲ್.—ಎಲ್ಲಾ ಫಾರೆಸ್ಟ್ ಆಫೀಸರ್ಸ್ ತಪ್ಪು ಮಾಡುತ್ತಾರೆನ್ನುವ ಹಾಗೆ ಮಾತನಾಡುತ್ತೀರಿ. ಆದರೆ ಇವತ್ತು ಕಾಡುಮೃಗಗಳಿಗೆ ಪಶ ಇಷ್ಟು ಮಿತಿ ಎಂದು ನಿರ್ದಿಷ್ಟ ಗೊಳಿಸಿರುವಾಗ ಆ ಮಿತಿಯನ್ನು ಎನ್‌ಕ್ರೋಚ್ ಮಾಡಿರುವವರೆಗೆ ಏನು ಶಿಕ್ಷೆ ಮಾಡುತ್ತೀರಿ ? ಹಾನಿಗಳಾಗುತ್ತಿವೆ ಎಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಾರೆ ಆ ಹಾನಿಗಳು ಅವರ ಏರಿಯಾದಲ್ಲಿ ಆಗುತ್ತವೋ ಅಥವಾ ಇವರು ಆ ಏರಿಯ ಏನ್‌ಕ್ರೋಚ್ ಮಾಡಿದ್ದರಲ್ಲಿ ಆಗುತ್ತದೂ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರ ?

ಶ್ರೀ ಕೆ.ಹೆಚ್. ರಂಗನಾಥ್.— ಇದು ಒಳ್ಳೆಯ ಸಲಹೆ, ಅವರಿಗೆ ಶಿಕ್ಷೆ ಕೊಡಬೇಕಾಗುತ್ತದೆ. ರಿಸರ್ವ್ ಫಾರೆಸ್ಟ್ ಎನ್‌ಕ್ರೋಚ್ ಮಾಡಿರುವವರಿಗೆ ಶಿಕ್ಷೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಶ್ರೀಮತಿ ಮೋಟಮ್ಮನವರೇ, ಈ ವಿಷಯದ ಬಗ್ಗೆ ತಾವು ಗಮನ ಸೆಳೆಯೆಂಬ ಸೂಚನೆ ಕಳುಹಿಸಿದ್ದೀರಿ ತಾವೂ ಪ್ರಶ್ನೆ ಕೇಳುವುದಿದ್ದರೆ ಕೇಳಿ.

ಶ್ರೀಮತಿ ಮೋಟಮ್ಮ.—ನಮ್ಮ ತಾಲ್ಲೂಕಿನಲ್ಲಿ ಕಾಫಿಗೆ ಹೆಚ್ಚು ಪ್ರಾಮುಖ್ಯತೆ ಇದ್ದು ಇತ್ತೀಚೆಗೆ ಅಲ್ಲಿ ಬಾಳೆಯನ್ನೂ ಬೆಳೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಬಾಳೆ ತೋಟದಲ್ಲಿ ಆನೆಗಳು ಹಾವಳಿ ನಡೆಸಿದ್ದು ಇತ್ತೀಚೆಗೆ ಮಾನ್ಯ ಸಚಿವರು ಮೂಡಿಗೆರೆ ತಾಲ್ಲೂಕಿಗೆ ಮತ್ತು ಚಿಕ್ಕಮಗಳೂರಿಗೆ ಭೇಟ ಕೊಟ್ಟಾಗ ರೈತರು ತಮ್ಮ ಕಷ್ಟವನ್ನು ಹೇಳಿಕೊಂಡಿದ್ದಾರೆ. ಆನೆಗಳನ್ನು ಹಿಡಿಯುವುದಕ್ಕೆ ಏನಾದರೂ

ವ್ಯವಸ್ಥೆ ಮಾಡಿ ಎಂದರೆ ಅದು ದೊಡ್ಡ ಕಾರ್ಯಕ್ರಮ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕಾದ್ದರಿಂದ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಈಗ ಹೇಗೆ ಆನೆಗಳ ಹಾವಳಿಯನ್ನು ತಪ್ಪಿಸುತ್ತಾರೆ ಎನ್ನುವುದು ಒಂದು ಪ್ರಶ್ನೆ. ಜೊತೆಗೆ ನನ್ನ ತಾಲ್ಲೂಕಿನಲ್ಲಿ ೪–೫ ಜನ ಆನೆಗಳ ತುಳಿತಕ್ಕೆ ಒಳಗಾಗಿ ಸತ್ತಿದ್ದಾರೆ. ಅವರಿಗೂ ಸಾಕಷ್ಟು ಪರಿಹಾರ ಇನ್ನೂ ಸಿಕ್ಕಿಲ್ಲ. ಆದ್ದರಿಂದ ದಯವಿಟ್ಟು ಆದಷ್ಟು ಜಾಗ್ರತೆ ಆ ಜನರಿಗೆ ಪರಿಹಾರ ಒದಗಿಸುವುದರ ಜೊತೆಗೆ ಆನೆಗಳ ಹಾವಳಿಯಿಂದ ಆಗಿರುವ ನಷ್ಟವನ್ನು ತುಂಬಿಸಲಿಕ್ಕೆ ಸಾಕಷ್ಟು ಪರಿಹಾರ ಒದಗಿಸಿಕೊಡಬೇಕೆಂದು ಈ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ —ಆನೆಗಳನ್ನು ತಡೆಯುವುದಕ್ಕೆ ಫೆನ್ಸಿಂಗ್ ಹಾಕಿದ್ದು, ಕಂದಕಗಳನ್ನೂ ಸಹಾ ತೋಡಿ ವಾಚರ್ಸ್‌ನ್ನು ಕೂಡಾ ಇಟ್ಟಿದ್ದೇವೆ. ನಾವು ಕ್ರಮ ತೆಗೆದುಕೊಂಡಿದ್ದೇವೆ. ತಮಗೆಲ್ಲಾ ತಿಳಿದ ಪ್ರಕಾರ ಕಾಡು ಇರತಕ್ಕ ಜಾಗದಲ್ಲಿ ಅಣೆಕಟ್ಟು ಮಾಡಿ ಕಾಡನ್ನು ಕಡಿಮೆ ಮಾಡಲಾಗಿದೆ. ಮತ್ತೆ ಇನ್ನಿತರ ಬಾಬಿಗಾಗಿ ಕಾಡು ಕಡಿದಿದ್ದರಿಂದ ಅಲ್ಲಿ ವಾಸ ಮಾಡತಕ್ಕ ಪ್ರಾಣಿಗಳು ಬೇರೆ ಕಡೆಗೆ ಹೋಗುವುದು ಸ್ವಾಭಾವಿಕ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಹಾಗೆ, ಸಾಮಾನ್ಯವಾಗಿ ಬಾಳೆ, ಕಬ್ಬು, ಭತ್ತ, ತೆಂಗು ಇರುವ ಪ್ರದೇಶಕ್ಕೆ ಆನೆಗಳು ಬರುತ್ತವೆ. ಅವು ತಿನ್ನತಕ್ಕ ಆಹಾರ ಅದು ಆಗಿದೆ. ಮಾನ್ಯ ಸದಸ್ಯರು ಹೇಳಿದ ವಿಷಯಗಳನ್ನು ಗಮನಕ್ಕೆ ತೆಗೆದು ಕೊಳ್ಳಲಾಗುವುದು.

ಶ್ರೀ ಎಂ. ಮಹದೇವ್.—ಮಾನ್ಯ ಸಚಿವರನ್ನು ಕರೆದುಕೊಂಡು ಹೋಗಿ ಎರಡು ದಿವಸ ಕಾಡಿನಲ್ಲಿ ಕ್ಯಾಂಪ್ ಮಾಡಿಸಬೇಕು.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸಚಿವರು ಹೇಳಿದ್ದು ಅಕ್ಷರಶಃ ನಿಜ ಎನ್ನುವುದನ್ನು ನಾನು ಒಪ್ಪುತ್ತಿದ್ದೇನೆ. ಇವತ್ತು ಎಲ್ಲಾ ಸಂರಕ್ಷಿತ ಕಾಡುಗಳಲ್ಲಿ ಪ್ರಾಣಿಗಳಿಗೆ ಮೇವು ಇರಬೇಕಾಗುತ್ತದೆ ಅಂತಹ ಕಡೆ ಪ್ರಾಣಿಗಳಿಗೆ ನಾವು ಸಹಾನುಭೂತಿ ತೋರಿಸಬೇಕಾಗುತ್ತದೆ. ಇವತ್ತು ನೊಂದಂಥ ರೈತರಿಗೆ, ಅದರಿಂದ ಕೊಲ್ಲಲ್ಪಟ್ಟಂಥ ಜನತೆಗೆ ನಾವು ಸಹಾನುಭೂತಿ ತೋರಿಸುತ್ತೇವೆ, ಪರಿಹಾರ ಕೇಳುತ್ತೇವೆ. ಆದರೆ ಆ ಪ್ರಾಣಿಗಳು ಕೇಳುವಂಥ ಪರಿಸ್ಥಿತಿಯಲ್ಲಿಲ್ಲ. ಆದರಲ್ಲೂ ಸಂರಕ್ಷಿತ ಜಾಗಗಳಲ್ಲಿ ಇರಬೇಕಾದ ಕಾಡು ಪ್ರಾಣಿಗಳಂ ಅಲ್ಲಿ ಬಿಟ್ಟು ಹೊಲ ಗದ್ದೆಗಳಿಗೆ ನುಗ್ಗಿ ಲೂಟಿ ಮಾಡುತ್ತವೆ. ಏಕೆಂದರೆ ಕೆಲವು ರೈತರು ಹೋಗಿ ಕಾಡನ್ನು ಲೂಟಿ ಮಾಡುವುದರಿಂದ ಅವು ಅಲ್ಲಿ ಮೇವಿಲ್ಲದೆ ಇಲ್ಲಿಗೆ ಬರಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ನಿಬಂಧನೆ ಹಾಕುವುದರಲ್ಲಿ ನಮ್ಮ ಸರ್ಕಾರಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಸ್ಪಷ್ಟವಾಗಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವತ್ತು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವವರಿಗೆ ಅದನ್ನು ಖಾಯಂ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದಹಾಗೆ ಕಾಣುತ್ತದೆ. ಆ ರೀತಿ ಖಾಯಂ ಮಾಡುವುದರಿಂದ ಅರಣ್ಯ ಮೃಗಗಳ ಪೋಷಣೆ ಹಾಗೂ ಬೆಳವಣಿಗೆಗೆ ಅಡ್ಡಿಯಾಗುವುದಿಲ್ಲವೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಸತ್ಯಾಂಶ ಕೂಡಾ ಇದೆ. ಇಲ್ಲ ಎಂದಲ್ಲ. ಆದರೆ ಒತ್ತುವರಿ ಮಾಡಿರತಕ್ಕ ಪ್ರದೇಶ ಯಾವುದು ಎಂದು ಅರಣ್ಯ ಇಲಾಖೆಯವರು ಸರ್ವೆ ಮಾಡುತ್ತಿದ್ದಾರೆ. ಸಿ ಮತ್ತು ಡಿ ಲ್ಯಾಂಡ್ ಎಂದು ಗ್ರಾಮಗಳಿಗೆ ಹತ್ತಿರ ಇರತಕ್ಕ ಪ್ರದೇಶ ಏನು ಇದೆ ಅದನ್ನು ಫಾರೆಸ್ಟ್‌ಗೆ ಸೇರಿಸಬೇಕೆಂದು ತೀರ್ಮಾನ ತೆಗೆದುಕೊಂಡು ಸೇರಿಸಿದ್ದಾರೆ. ಅಲ್ಲಿ ಒತ್ತುವರಿ ಆಗಿರುತ್ತದೆ. ಹಾಗೆ ಒತ್ತುವರಿ ಆಗಿರುವುದರಲ್ಲೂ ಕೂಡ ಎಲ್ಲರಿಗೂ ಖಾಯಂ ಮಾಡಲಿಕ್ಕೆ ಸಾಧ್ಯ ಆಗುವುದಿಲ್ಲ. ಯಾರು ಏನೂ ಇಲ್ಲದೇ ಇರುವವರು ಒತ್ತುವರಿ ಮಾಡಿದ್ದಾರೆ ಅದನ್ನು ಮಾತ್ರ ಖಾಯಂ ಮಾಡಬೇಕಾಗುತ್ತದೆ. ಕೆಲವರು ಒತ್ತುವರಿ ಮಾಡುವ ಉದ್ಯಮ ಮಾಡುವವರಿದ್ದಾರೆ. ಅವರಿಗೆ ಖಾಯಂ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸಭಾಧ್ಯಕ್ಷರೆ, ಆನೆಗಳ ಬಗ್ಗೆ ಅಂಕಿಅಂಶ ನನ್ನ ಹತ್ತಿರವಿದೆ. ವೀರೇಂದ್ರಪಾಟೀಲರ ಸರ್ಕಾರ ಬಂದಮೇಲೆ ಕಾಂಗ್ರೆಸ್ ಆನೆಗಳ ಕಾಟ ಬಹಳ ಜಾಸ್ತಿಯಾಗಿದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸಭಾಧ್ಯಕ್ಷರೇ ಆನೆ ಕಾಟದ ಚರ್ಚೆಯ ನಡುವೆ ನನಗೆ ಕಂಡು ಬರುತ್ತಿರುವುದು ಏನೆಂದರೆ ನಾವು ಸಮಸ್ಯೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಮತ್ತೆ ಈ ಸಮಸ್ಯೆಯನ್ನು ಸ್ವಲ್ಪ ಕಿರುಚುತ್ತಿದ್ದೇವೆ. ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವ ರೈತರಿಂದ ಆನೆ ಕಾಟ ಪ್ರಾರಂಭವಾಗಿಲ್ಲ. ನಮ್ಮ ಸಾಮಾಜಿಕ ಅರಣ್ಯೀಕರಣದ ಕಾರಣ ದಿಂದ ಆನೆ ಕಾಟ

ಪ್ರಾರಂಭವಾಗಿದೆ. ವನ್ಯಪ್ರಾಣಿಗಳು ವಾಸ ಮಾಡುವಂತಹ ಸ್ಥಳವನ್ನು ನಾವು ಕಲುಷಿತಗೊಳಿಸುತ್ತಿದ್ದೇವೆ, ಆ ಕಾರಣದಿಂದ ಕಾಡಿನಿಂದ ಆನೆಗಳು ಹೊರಗಡೆ ಬರುತ್ತವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅರಣ್ಯವನ್ನು ಯಾರು ಕಲುಷಿತ ಮಾಡುತ್ತಿದ್ದಾರೆ ? ಯಾರು ಈ ಕೆಲಸವನ್ನು ಮಾಡುತ್ತಿದ್ದಾರೆ ? ಇದು ಮೂಲ ಕಾರಣ ನೈಸರ್ಗಿಕ ಅರಣ್ಯವನ್ನು ನಾಶಮಾಡಿ ಯೂಕಲಿಪ್ಟಸ್ ಮಾನೋಕಲ್ಚರ್ ಎಂದು ನಾವು ಏನು ಬೆಳೆಸುತ್ತಿದ್ದೇವೆ, ಆ ಕಾರಣದಿಂದ ತೀರ್ಥಹಳ್ಳಿಗೆ ಹುಲಿನೂ ಬರುತ್ತದೆ, ಹೆಗ್ಗಡದೇವನಕೋಟೆಗೆ ಗುಂಡ್ಲುಪೇಟೆಗೆ ಮತ್ತು ಬೆಂಗಳೂರಿಗೆ ಆನೆಗಳೂ ಬರುತ್ತವೆ. ಆದ್ದರಿಂದ ಸ್ವಲ್ಪ ಪ್ರಾಮಾಣಿಕವಾಗಿ ಆಲೋಚನೆ ಮಾಡೋಣ ಒತ್ತುವರಿ ಮಾಡಿರುವ ಸಣ್ಣ ರೈತರಿಂದ ಈ ಸಮಸ್ಯೆ ಉದ್ಭವವಾಗಿಲ್ಲ. ಈ ಸಮಸ್ಯೆ ಉದ್ಭವವಾಗಿರುವುದು ನಮ್ಮ ಸರ್ಕಾರಿ ನೀತಿಯಿಂದ ನಾವು ಅರಣ್ಯ ನೀತಿ, ಸಾಮಾಜಿಕ ಅರಣ್ಯೀಕರಣವನ್ನು ಏನು ಮಾಡಿದ್ದೇವೆ ಅದನ್ನು ಪುನರ್ವಿಮರ್ಶೆ ಮಾಡದೆ ಇದ್ದರೆ ಈ ವನ್ಯಪ್ರಾಣಿಗಳ ಕಾಟವನ್ನು ನಿಮ್ಮಿಂದ ಮಾತ್ರ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಸಭಾಧ್ಯಕ್ಷರೆ, ಸಮಸ್ಯೆಯಿಂದ ದೂರ ಹೋಗಬೇಕು, ಅದಕ್ಕೆ ಬೇರೆ ತಿರುವು ಕೊಡಬೇಕೆನ್ನುವ ದೃಷ್ಟಿಯಿಂದ ನಾನು ಈ ಪ್ರಶ್ನೆಗೆ ಉತ್ತರಿಸುತ್ತಾ ಇಲ್ಲ, ಮಾನ್ಯ ಸದಸ್ಯರು ಹೇಳಿದಹಾಗೆ, ಈ ಪ್ರಶ್ನೆ ಮೂಲಭೂತವಾಗಿ ವಿಚಾರ ಪೂರಿತಕ್ಕ ಪ್ರಶ್ನೆ. ಮಾನ್ಯ ಕೆ. ಎಚ್. ಪಾಟೀಲ್‌ರವರು ಪ್ರಸ್ತಾಪ ಮಾಡುತ್ತಿದ್ದರು. ರಿಸರ್ವ್ ಫಾರೆಸ್ಟ್ ಏನಿದೆ ಅಲ್ಲಿ ಒತ್ತುವರಿ ಯಾರು ಮಾಡಿರುತ್ತಾರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಅದನ್ನು ಸರ್ಕಾರ ಮಾಡುವುದೇ ಇಲ್ಲ. ನಾವು ಸಿ ಅಂಡ್ ಡಿ ಲ್ಯಾಂಡ್ ಎಂದು ಏನು ಹೇಳಿದ್ದೇವೆ ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ರಿಸರ್ವ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಎಂದು ಇತ್ತು. ಹಾಗಾಗಿ ಮನೆಯಿಂದ ಆಚೆ ಹೋದರೂ ಕೂಡ ಅದನ್ನು ಫಾರೆಸ್ಟ್ ಎಂದು ಕರೆಯುತ್ತಿದ್ದರು. ಇಂತಹ ಕೆಲವು ಭಾಗಗಳನ್ನು ಕೆಲವರು ಸಣ್ಣಪುಟ್ಟ ರೈತರು ಒತ್ತುವರಿ ಮಾಡಿದ್ದಾರೆ, ಅದನ್ನು ನಾವು ಖಾಯಂ ಮಾಡಿ ಕೊಡಲೇಬೇಕಾಗುತ್ತದೆ. ಇದನ್ನೆ ನೆಪ ಮಾಡಿಕೊಂಡು ರಿಸರ್ವ್ ಫಾರೆಸ್ಟನ್ನು ಕೆಲವರು ದೊಡ್ಡವರು ಒತ್ತುವರಿ ಮಾಡಿದ್ದಾರೆ. ಕೆಲವರು ಗ್ರ್ಯಾಂಟನ್ನು ಸಹ ಮಾಡಿಸಿಕೊಂಡಿದ್ದಾರೆ. ಈ ರೀತಿ ಕೆಲವರು ಗ್ರ್ಯಾಂಟ್ ಮಾಡಿಸಿಕೊಂಡಿರುವುದನ್ನು ಪುನರ್ಪರಿಶೀಲನೆ ಮಾಡಿ ಇವತ್ತಿನದಿವಸ ಅದನ್ನು ಮಜಾ ಮಾಡಬೇಕಾಗುತ್ತದೆ ಏತಕ್ಕೆ ಅಂದರೆ ಎಲ್ಲಿ ಹೆಚ್ಚು ಬೆಲೆ ಬಾಳತಕ್ಕ ಮರಗಳಿವೆ ಅಲ್ಲಿ ಫಾರೆಸ್ಟ್ ಲ್ಯಾಂಡನ್ನು ಸ್ಕ್ರಾಂಕ್ಷನ್ ಮಾಡಿಸಿಕೊಂಡಿರತಕ್ಕದ್ದು ಉಂಟು. ಅದನ್ನು ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇದೆ. ಇನ್ನೊಂದು ವಿಚಾರ ಹೇಳಿದ್ದೇನೆ, ಹಾರಂಗಿ ಡ್ಯಾಮ್ ಕಟ್ಟಿದ್ದೇವೆ, ಕಂಬ್ರದಕ ಡ್ಯಾಮ್ ಕಟ್ಟಿದ್ದೇವೆ. ಹೇಮಾವತಿ ಕಟ್ಟಿದ್ದೇವೆ. ಈ ನದಿಗಳಂ ಹರಿಯುತ್ತಾ ಇದ್ದದ್ದೇ ಆನೆಗಳಿದ್ದಂಥ ಒಂದು ಪ್ರದೇಶದಲ್ಲಿ. ಅಲ್ಲೆಲ್ಲಾ ಇದು ಬಂದಿದ್ದರಿಂದ ಇವತ್ತು ಅವಕ್ಕೆ ಇರುವುದಕ್ಕೆ ಜಾಗವಿಲ್ಲದ ಪರಿಸ್ಥಿತಿ ಒಂದು ಅವು ಬೆಂಗಳೂರಿಗೂ ಬರತಕ್ಕಂಥ ಪರಿಸ್ಥಿತಿಯಾಗಿದೆ. ಮತ್ತೆ ತೀರ್ಥಹಳ್ಳಿಯನ್ನೂ ಬಿಟ್ಟು ಬರತಕ್ಕಂಥ ಪರಿಸ್ಥಿತಿಯಾಗಿ ಇವತ್ತು ಈ ತೊಂದರೆಗೆ ಒಳಗಾಗಿದ್ದೇವೆ. ನಾವು ಇದರಿಂದ ದೂರಹೋಗಬೇಕೆಂದು ವಿಚಾರ ಮಾಡುತ್ತಿಲ್ಲ ಮಾನ್ಯ ಸದಸ್ಯರು ಯೂಕಲಿಪ್ಟಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಫಾರೆಸ್ಟ್ ಇಲಾಖೆಯ ಮೇಲೆ ಚರ್ಚೆ ಮಾಡುವಾಗ ಆ ಸಮಯದಲ್ಲಿ ಪ್ರಸ್ತಾಪ ಮಾಡುವುದಂ ಅವಶ್ಯಕತೆಯಿದೆ. ಉತ್ತಮವಾಗಿರತಕ್ಕ ಸಲಹೆಗಳನ್ನು ಹೇಳಬಹುದು. ಆ ಸಮಯದಲ್ಲಿ ಅದಕ್ಕೆ ಉತ್ತರ ಕೊಡಲಿಕ್ಕೆ ಇಷ್ಟಪಡುತ್ತೇನೆ.

Strength of the daily wages workers in Forest Department, Bidar.

451 Sri Narayana Rao Manahalli (Bidar).—Will the Minister for Forests be pleased to state.—

a) the number of daily wages workers are working in the Forest Deptt. in Bidar District since 5 to 10 years.

b) whether it has come to the notice of the Government that these workers are not getting minimum wages as per the orders of Supreme Court ?

c) if so, the steps taken by the Government to pay them minimum wages ?